ರಾಧೇಶ ತೋಳ್ಪಾಡಿ
ಸಂದರ್ಶನ

# ಮಗುವಾಗಿಯೇ ಉಳಿಯುವ ಆಸೆ ಯಾರಿಗಿಲ್ಲ ಹೇಳಿ!

**1** ಮಕ್ಕಳ ಸಾಹಿತ್ಯವನ್ನು ನಿಮ್ಮ ಬರವಣಿಗೆಯ ಪ್ರಮುಖ ಪ್ರಕಾರವನ್ನಾಗಿ ಆರಿಸಿಕೊಂಡಿರುವುದು ಏಕೆ?

**2** ಮಕ್ಕಳಿಗಾಗಿ ಬರೆಯುತ್ತಿರುವುದಕ್ಕೆ ನಿರ್ದಿಷ್ಟ ಕಾರಣಗಳೇನಾದರೂ ಇವೆಯೆ?

**3** ಕಥೆ–ಕವಿತೆ ಹಚ್ಚಿಕೊಂಡ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ ಅನ್ನಿಸಿದೆಯೆ? ಹೌದು ಎನ್ನುವುದಾದರೆ, ನಿರುತ್ಸಾಹದ ಸನ್ನಿವೇಶದಲ್ಲೂ ಬರೆಯುವ ಉತ್ಸಾಹವನ್ನು ನಿಮ್ಮಲ್ಲಿ ಉಳಿಸಿರುವ ಅಂಶ ಯಾವುದು?

**4** ಮಕ್ಕಳಿಗಾಗಿ ಬರೆಯುವವರು ಮುಖ್ಯವಾಗಿ ಯಾವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು? ಹಾಗೆ ನಿಮ್ಮ ಮನಸ್ಸಿನಲ್ಲಿರುವುದು ಏನು?

**5** ಮಕ್ಕಳಿಗೆ ಬೇಕಾದುದು ಏನು? ಬರಹಗಾರ ಅದನ್ನು ಅರಿಯುವ ಕ್ರಮ ಹೇಗೆ?

**6** ಮಕ್ಕಳಿಗಾಗಿ ಬರೆಯುವುದರ ಬದಲು ದೊಡ್ಡವರಿಗಾಗಿ ಬರೆದಿದ್ದರೆ ಚೆನ್ನಾಗಿತ್ತು ಎಂದು ಯಾವಾಗಲಾದರೂ ಅನ್ನಿಸಿದೆಯೆ?

**7** ನಿಮ್ಮ ಬರವಣಿಗೆಗೆ ಸಂಬಂಧಿಸಿದಂತೆ ಈವರೆಗೆ ದೊರೆತಿರುವ ಅತ್ಯುತ್ತಮ ಪ್ರಶಂಸೆ ಯಾವುದು?

**1**

ಪ್ರಾಥಮಿಕ ಶಾಲಾ ಅಧ್ಯಾಪಕನಾಗಿ ವೃತ್ತಿ ಜೀವನದ ಮೊದಲ ದಿನ ಆದ ಅನುಭವ ಇಂದು ನನ್ನನ್ನು ಮಕ್ಕಳ ಸಾಹಿತ್ಯ ಲೇಖಕನನ್ನಾಗಿ ಮಾಡಿದೆ ಎಂದು ಹೇಳಬೇಕು.

ಮೊಟ್ಟ ಮೊದಲಿಗೆ, ನಾಲ್ಕನೇ ತರಗತಿಯ ಮಕ್ಕಳ ಮುಂದೆ ನಿಂತಾಗ ಆ ಪುಟ್ಟ ಪುಟ್ಟ ಕಣ್ಣುಗಳಲ್ಲಿ ಕಂಡು ಬಂದ ನಿರೀಕ್ಷೆ, ಇವರು ನಮಗೆ ಏನೋ ಉಣಬಡಿಸುತ್ತಾರೆಂಬ ಕುತೂಹಲ ಮೈ ಚಳಿ ಹುಟ್ಟಿಸಿಬಿಟ್ಟಿತು. ಇವರಿಗೆ ನಾನೇನು ಕೊಡಬಲ್ಲೆ ಎಂಬ ಪ್ರಶ್ನೆ ಮೂಡಿತು. ಎಂಥ ದೊಡ್ಡ ಜವಾಬ್ದಾರಿ ಹೆಗಲ ಮೇಲೆ ಇದೆ ಎಂದು ಭಯವಾಯಿತು. ಹಾಗೆ ಕನ್ನಡದ ಅತ್ಯುತ್ತಮ ಮಕ್ಕಳ ಕತೆ, ಕವಿತೆ, ನಾಟಕಗಳ ಸಂಗ್ರಹದ ಹುಚ್ಚು ಶುರುವಾಯಿತು. ನನಗೆ ಪಾಠ ಹೇಳಿದ ಮುಖ್ಯ ಗುರುಗಳ ಬಳಿ ಹೋಗಿ ಅವರ ಸಂಗ್ರಹದ ಕವಿತೆಗಳನ್ನು ಕೇಳಿದಾಗ, 'ನಿನಗೆ ನನ್ನಲ್ಲಿ ಇರುವುದನ್ನು ಕೊಡುತ್ತೇನೆ, ಆದರೆ ನೀನೇ ಯಾಕೆ ಬರೆಯಬಾರದು' ಎಂದು ಕೇಳಿದ್ದು, ಹೊಸ ಕ್ಷಿತಿಜದ ಬಾಗಿಲು ತೆರೆದಂತಾಯಿತು. ಮಕ್ಕಳಿಗಾಗಿ ಬರೆವಣಿಗೆ